ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಶಾಖೆ / ವಿಷಯ : DEPARTMENT / SUBJECT: 19 ಇತರೆ ರಾಜ್ಯ ಮಾಹಿತಿ - Covid-19

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 5/4/21

# ಮಹಾ ಸೆಮಿಲಾಕ್

## ಮಹಾರಾಷ್ಟ್ರದಲ್ಲಿ ನೈಟ್ ಕರ್ಫ್ಯೂ, ವಾರಾಂತ್ಯ ಲಾಕ್‌ಡೌನ್ ಘೋಷಣೆ

## ಸೋಂಕಿಗೆ ಬ್ರೇಕ್ ಹಾಕಲು ವಿಪಕ್ಷಗಳ ಬೆಂಬಲದೊಂದಿಗೆ ಕಠಿಣ ಕ್ರಮ

**ನವದೆಹಲಿ/ಬೆಂಗಳೂರು:** ಕೊರೊನಾ ಸೋಂಕು ಪ್ರಕರಣಗಳು ದಿಢೀರ್ ಹೆಚ್ಚಳವಾಗುತ್ತಿರುವಂತೆಯೇ ಮಹಾರಾಷ್ಟ್ರ ಸರ್ಕಾರ ಸೆಮಿ ಲಾಕ್‌ಡೌನ್ ಘೋಷಿಸುವ ಮೂಲಕ ಸೋಂಕಿನ ವ್ಯಾಪಿಸುವಿಕೆಗೆ ಬ್ರೇಕ್ ಹಾಕಲು ಮುಂದಾಗಿದೆ. ಇತ್ತ ಕರ್ನಾಟಕದಲ್ಲಿ ಜಿಮ್‌ಗಳ ಸ್ಥಗಿತಕ್ಕೆ ಆದೇಶ ಮಾಡಿದ್ದ ರಾಜ್ಯ ಸರ್ಕಾರ, ಭಾನುವಾರ ಪರಿಷ್ಕೃತ ಆದೇಶ ಹೊರಡಿಸಿದ್ದು, ಶೇ.50ರಷ್ಟು ಜನರೊಂದಿಗೆ ಜಿಮ್ ತೆರೆಯಬಹುದು ಎಂದಿದೆ.

ಮಹಾರಾಷ್ಟ್ರದಲ್ಲಿ ಸತತ 3 ದಿನಗಳಿಂದಲೂ 50 ಸಾವಿರ ದಷ್ಟು ಪ್ರಕರಣಗಳು ಪತ್ತೆಯಾದ ಹಿನ್ನೆಲೆಯಲ್ಲಿ ವಾರಾಂತ್ಯದ ಲಾಕ್‌ಡೌನ್, ನೈಟ್ ಕರ್ಫ್ಯೂ, ಸೆಕ್ಷನ್ 144ರನ್ವಯ ನಿಷೇಧಾಜ್ಞೆ ಜಾರಿ ಮಾಡಿ ಸಿಎಂ ಉದ್ಧವ್ ಠಾಕ್ರೆ ಆದೇಶ ಹೊರಡಿಸಿದ್ದಾರೆ. ಸೋಮವಾರದಿಂದಲೇ ಈ ನಿಯಮಗಳು ಅನ್ವಯವಾಗಲಿದ್ದು ಏ.30ರವರೆಗೂ ಮುಂದುವರಿಯಲಿದೆ.

ಭಾನುವಾರ ನಡೆದ ಮಹಾರಾಷ್ಟ್ರ ಸಂಪುಟ ಸಭೆಯಲ್ಲಿ ಸಂಪೂರ್ಣ ಲಾಕ್‌ಡೌನ್ ಹೇರುವುದು ಬೇಡ ಎಂಬ ಅಭಿಪ್ರಾಯ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ 'ಭಾಗಶಃ ನಿರ್ಬಂಧ' ಹೇರುವ ನಿರ್ಧಾರಕ್ಕೆ ಬರಲಾಗಿದೆ.

**ಎಲ್ಲರ ವಿಶ್ವಾಸದೊಂದಿಗೆ ನಿರ್ಧಾರ:** ಲಾಕ್‌ಡೌನ್ ಕುರಿತು ಇನ್ನೆರಡು ದಿನಗಳಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಶುಕ್ರವಾರವೇ ಘೋಷಿಸಿದ್ದ ಸಿಎಂ ಉದ್ಧವ್ ಠಾಕ್ರೆ, ಎಲ್ಲ ರಾಜಕೀಯ ಪಕ್ಷಗಳ ನಾಯಕರು ಹಾಗೂ ಮಲ್ಟಿಪ್ಲೆಕ್ಸ್, ಜಿಮ್, ಪತ್ರಿಕೆಗಳ ಮಾಲೀಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಭಾನುವಾರ ಬೆಳಗ್ಗೆವರೆಗೂ ಸಮಾಲೋಚನೆ ನಡೆಸಿ ಸಂಜೆ ವೇಳೆಗೆ ತೀರ್ಮಾನ ಘೋಷಿಸಿದ್ದಾರೆ. ಇದಕ್ಕೂ ಮುನ್ನ ಮಾಜಿ ಸಿಎಂ, ಪ್ರತಿಪಕ್ಷ ನಾಯಕ ದೇವೇಂದ್ರ ಫಡ್ನವೀಸ್, ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಅವರೊಂದಿಗೂ ಮಾತುಕತೆ ನಡೆಸಿ, ನಿರ್ಬಂಧ ಹೇರಲು ಬೆಂಬಲ ಕೋರಿದ್ದರು. ಅದಕ್ಕೆ ಇವರಿಬ್ಬರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದರು.

**ನಾಳೆಯಿಂದ ವಿಶೇಷ ಅಭಿಯಾನ:** ಸೋಂಕಿತರ ಸಂಖ್ಯೆ ಏರುಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಭಾನುವಾರ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಪರೀಕ್ಷೆ, ಸಂಪರ್ಕಿತರ ಪತ್ತೆ, ಚಿಕಿತ್ಸೆ, ಕೊರೊನಾ ಮಾರ್ಗಸೂಚಿ ಪಾಲನೆ ಮತ್ತು ಲಸಿಕೆ ಸ್ವೀಕಾರದಂತಹ 5 ಅಂಶಗಳ ಕಾರ್ಯತಂತ್ರವನ್ನು ಅನುಸರಿಸಿದರೆ ಸೋಂಕಿಗೆ ಕಡಿವಾಣ ಹಾಕಲು ಸಾಧ್ಯ ಎಂದು ಅವರು ಸಲಹೆ ನೀಡಿದ್ದಾರೆ. ಶೇ.100ರಷ್ಟು ಮಾಸ್ಕ್ ಬಳಕೆ, ವೈಯಕ್ತಿಕ ನೈರ್ಮಲ್ಯ, ಸಾರ್ವಜನಿಕ ಸ್ಥಳಗಳಲ್ಲಿ ಸ್ಯಾನಿಟೇಶನ್‌ಗೆ ಮಹತ್ವ ನೀಡುವಂಥ ವಿಶೇಷ ಅಭಿಯಾನವನ್ನು ಏ.6ರಿಂದ 14ರವರೆಗೆ ನಡೆಸುವ ಘೋಷಣೆಯನ್ನೂ ಮಾಡಿದ್ದಾರೆ.



ರಾತ್ರಿ ಕರ್ಫ್ಯೂ ಹಿನ್ನೆಲೆಯಲ್ಲಿ ಬಿಕೋ ಎನ್ನುತ್ತಿರುವ ಮಧ್ಯಪ್ರದೇಶದ ಭೋಪಾಲ್‌ನ ರಸ್ತೆಗಳು.

### ಜಿಮ್‌ಗಳಲ್ಲಿ ಶೇ.50 ಅನುಮತಿ

ಜಿಮ್‌ಗಳ ಮೇಲೆ ಕರ್ನಾಟಕ ಸರ್ಕಾರ ವಿಧಿಸಿದ್ದ ಕಠಿಣ ನಿಯಮವನ್ನು ಸಡಿಲಗೊಳಿಸಿದ್ದು, ಶೇ. 50 ಭರ್ತಿಯೊಂದಿಗೆ ಕಾರ್ಯಾಚರಣೆ ನಡೆಸಲು ಅನುಮತಿ ನೀಡಲಾಗಿದೆ. ಜಿಮ್ ಮಾಲೀಕರ ಮನವಿ ಮೇರೆಗೆ ಅವರುಗಳ ಜೀವನೋಪಾಯವನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿಗಳು ನಿಯಮ ಸಡಿಲಿಕೆಗೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆ ಪರಿಷ್ಕೃತ ಮಾರ್ಗಸೂಚಿ ಹೊರಡಿಸಲಾಗಿದೆ. ಈ ಪ್ರಕಾರ ಜಿಮ್ ತೆರೆದ ಸಮಯದಲ್ಲಿ 50 ಆಸನಗಳನ್ನು ಮಾತ್ರ ಭರ್ತಿ ಮಾಡಿರಬೇಕು. ಕಡ್ಡಾಯ ವಾಗಿ ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು, ಸ್ಯಾನಿಟೈಸರ್ ವ್ಯವಸ್ಥೆ ಮಾಡಬೇಕು. ಬಳಕೆಯ ನಂತರ ಕಡ್ಡಾಯವಾಗಿ ಉಪಕರಣಗಳನ್ನು ಸ್ಯಾನಿಟೈಸ್ ಮಾಡಬೇಕು. ನ್ನು ಈ ನಿಯಮಗಳನ್ನು ಉಲ್ಲಂಘಿಸಿದರೆ ಜಿಮ್ ಗಳನ್ನು ಮುಚ್ಚಿಸಲಾಗುತ್ತದೆ ಎಂದು ಪರಿಷ್ಕೃತ ಮಾರ್ಗಸೂಚಿಯಲ್ಲಿ ಸರ್ಕಾರ ತಿಳಿಸಿದೆ. ಇನ್ನು ಸರ್ಕಾರದ ಅರ್ಧದಷ್ಟು ಭರ್ತಿಗೆ ಅವಕಾಶ ನೀಡಿರುವುದಕ್ಕೆ ಜಿಮ್ ಮಾಲೀಕರು, ತರಬೇತುದಾರರು ಸರ್ಕಾರಕ್ಕೆ ಅಭಿನಂದನೆ ತಿಳಿಸಿದ್ದಾರೆ.

### ಹೇಗಿರುತ್ತೆ ಸೆಮಿ ಲಾಕ್‌ಡೌನ್?

- ಶುಕ್ರವಾರ ರಾತ್ರಿ 8ರಿಂದ ಸೋಮವಾರ ಬೆಳಗ್ಗೆ 7ರವರೆಗೆ ವಾರಾಂತ್ಯ ಲಾಕ್‌ಡೌನ್
- ಇಂದಿನಿಂದ ಏಪ್ರಿಲ್ 30 ರವರೆಗೆ ರಾತ್ರಿ 8ರಿಂದ ಬೆ.7ರವರೆಗೆ ನೈಟ್ ಕರ್ಫ್ಯೂ
- ಹಗಲು ಹೊತ್ತಲ್ಲಿ 5ಕ್ಕಿಂತ ಹೆಚ್ಚು ಜನ ಒಂದೆಡೆ ಸೇರುವಂತಿಲ್ಲ
- ಮಾಲ್, ರೆಸ್ಟಾರೆಂಟ್, ಬಾರ್, ಧಾರ್ಮಿಕ ಕೇಂದ್ರ, ಥಿಯೇಟರ್, ಪಾರ್ಕ್‌ಗಳು ಬಂದ್
- ಅತ್ಯವಶ್ಯಕ ಸಾಮಗ್ರಿಗಳ ಹೋಂ ಡೆಲಿವರಿಗೆ ಅವಕಾಶ
- ಕೈಗಾರಿಕಾ ಚಟುವಟಿಕೆಗಳು, ನಿರ್ಮಾಣ ಕಾಮಗಾರಿ ಕೈಗೊಳ್ಳಲು ಅನುಮತಿ
- ಹೆಚ್ಚು ಜನರಿಲ್ಲದೆ ಸಿನಿಮಾ ಚಿತ್ರೀಕರಣಕ್ಕೆ ಅನುಮತಿ
- ಶೇ.50ರ ಆಸನ ಸಾಮರ್ಥ್ಯದಲ್ಲಿ ಸಾರ್ವಜನಿಕ ಸಾರಿಗೆ, ಇತರ ವಾಹನಗಳ ಸಂಚಾರ
- ಸಾರ್ವಜನಿಕ ಸ್ಥಳದಲ್ಲಿ ಮಾಸ್ಕ್ ಧರಿಸದಿದ್ದರೆ 500 ರೂ. ದಂಡ



### ಕೇಂದ್ರದಿಂದ 15.25 ಲಕ್ಷ ಡೋಸ್ ವ್ಯಾಕ್ಸಿನ್

ರಾಜ್ಯ ಸರ್ಕಾರದ ಮನವಿಯಂತೆ ಕೇಂದ್ರ ಸರ್ಕಾರ ತುರ್ತಾಗಿ 15.25 ಲಕ್ಷ ಡೋಸ್ ಲಸಿಕೆ ಕಳುಹಿಸುತ್ತಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ತಿಳಿಸಿದ್ದಾರೆ. ಸೋಮವಾರ 10 ಲಕ್ಷ ಡೋಸ್ ಲಸಿಕೆಯನ್ನು ಏರ್‌ಲಿಫ್ಟ್ ಮಾಡಲಾಗುತ್ತಿದೆ. ರಾಜ್ಯದಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಇನ್ನೂ 7 ಲಕ್ಷ ಡೋಸ್ ವ್ಯಾಕ್ಸಿನ್ ಲಭ್ಯವಿದೆ. ಶನಿವಾರ 2.5 ಲಕ್ಷ ಜನರಿಗೆ ಲಸಿಕೆ ಹಾಕಲಾಗಿದೆ. [illegible]